# ಕಾನೂನು ಕಿರಣ
# KANOONU KIRANA

**ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಕಾನೂನು ಸಾಕ್ಷರತಾ ಪತ್ರಿಕೆ**

**ಸಾರ್ವಜನಿಕ ಹಿತಾಸಕ್ತಿಯಲ್ಲಿ * ಖಾಸಗಿ ಪ್ರಸಾರಕ್ಕೆ ಮಾತ್ರ**

**LEGAL LITERACY NEWS LETTER OF KARNATAKA STATE LAW UNIVERSITY, HUBBALLI**

ಹುಬ್ಬಳ್ಳಿ ಡಿಸೆಂಬರ್ 2019 ಪುಟ-4


## ಕಾನೂನು ತಿದ್ದುಪಡಿ ಅಗತ್ಯ: ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಆರ್. ವಿ. ರವೀಂದ್ರನ್



ದಶಮಾನೋತ್ಸವದ ಅಂಗವಾಗಿ ದಿನಾಂಕ 22-11-2019 ರಂದು ಹಮ್ಮಿಕೊಂಡ 'ಕಾನೂನಿನಲ್ಲಿರುವ ವೈಪರೀತ್ಯಗಳು' ಕುರಿತ ವಿಶೇಷ ಉಪನ್ಯಾಸದಲ್ಲಿ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಆರ್. ವಿ. ರವೀಂದ್ರನ್, ಸನ್ಮಾನ್ಯ ಶ್ರೀ ಜೆ. ಸಿ. ಮಾಧುಸ್ವಾಮಿ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಸಮಕುಲಾಧಿಪತಿಗಳು, ಕರಾಕಾವಿ ಹುಬ್ಬಳ್ಳಿ ಹಾಗೂ ಇತರ ಗಣ್ಯರು ಉಪಸ್ಥಿತರಿರುವರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಮತ್ತು ಬೆಂಗಳೂರ್ ಇಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ವಿಶ್ವವಿದ್ಯಾಲಯದ ದಶಮಾನೋತ್ಸವದ ಅಂಗವಾಗಿ ದಿನಾಂಕ 22-11-2019 ರಂದು 'ಕಾನೂನಿನಲ್ಲಿರುವ ವೈಪರೀತ್ಯಗಳು' ಕುರಿತು ವಿಶೇಷ ಉಪನ್ಯಾಸವನ್ನು ಹಮ್ಮಿಕೊಂಡಿತ್ತು. ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಆರ್. ವಿ. ರವೀಂದ್ರನ್, ವಿಶ್ರಾಂತ ನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯ, ಭಾರತ ಸರಕಾರ ಇವರು ವಿಶೇಷ ಉಪನ್ಯಾಸವನ್ನು ನೀಡುತ್ತಾ, ಕಾನೂನಿನಲ್ಲಿರುವ ವೈಪರೀತ್ಯಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಸಂಕ್ಷಿಪ್ತವಾಗಿ ಪರಿಚಯಿಸಿ, ಕಾನೂನು ವೈಪರೀತ್ಯಗಳ ಉದ್ಭವಿಸುವಿಕೆಗೆ ದೋಷಯುಕ್ತ ಡ್ರಾಫ್ಟಿಂಗ್, ಶಾಸನಗಳ ಮರುಪರಿಶೀಲನೆ ಮತ್ತು ವಿಮರ್ಶೆ, ಕಾನೂನಿನ ಸಾಮಾನ್ಯತೆಗಳಂತಹ ಅಂಶಗಳೇ ಕಾರಣ ಎಂದರು. ಬೇರೆ ಬೇರೆ ನ್ಯಾಯಾಧೀಶರುಗಳಿಗೆ ಒಂದೇ ತರಹದ ಪ್ರಕರಣವನ್ನು ನೀಡಿದ್ದಾಗ್ಯೂ ಕೂಡ ಅವರು ಬೆಳೆದುಬಂದ ಪರಿಸರ ಮತ್ತು ಸಾಮಾಜಿಕ ಹಿನ್ನೆಲೆಯ ಅಂಶಗಳು ಬೇರೆ ಬೇರೆ ರೀತಿಯ ಫಲಿತಾಂಶಗಳಿಗೆ ಎಡೆಮಾಡಿಕೊಡುತ್ತವೆ. ಕಾಲ ಉರುಳಿದಂತೆ ಕೆಲವೊಂದು ಕಾನೂನುಗಳನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸಲು ಸಾಧ್ಯವಾಗದಿದ್ದಾಗ ಅಂತಹವುಗಳನ್ನು ತಿದ್ದುಪಡಿ ಮಾಡುವ ಆವಶ್ಯಕತೆ ಇದೆ ಎಂದರು. ಶ್ರೀ ಜೆ. ಸಿ. ಮಾಧುಸ್ವಾಮಿ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಸನ್ಮಾನ್ಯ ಸಮಕುಲಾಧಿಪತಿಗಳು, ಕರಾಕಾವಿ, ಹುಬ್ಬಳ್ಳಿ ಇವರು ವಕೀಲ ವೃತ್ತಿಯ ಮಹತ್ವವನ್ನು ಒತ್ತಿ ಹೇಳುತ್ತ, ವಕೀಲಿಕೆಗಿಂತ ಉತ್ತಮ ವೃತ್ತಿ ಇನ್ನೊಂದಿಲ್ಲ, ಆದರೆ ಕಠಿಣ ಪರಿಶ್ರಮ ಮತ್ತು ಸತತ ಅಭ್ಯಾಸ ಒಂದೇ ಯಶಸ್ಸಿಗೆ ದಾರಿ ಎಂದರು. ಬಡ ಮತ್ತು ಶ್ರೀಮಂತ ಪಕ್ಷಗಾರರ ಮಧ್ಯೆ ಬೇಧವನ್ನು ಮಾಡದೆ ಎಲ್ಲರನ್ನು ಸಮಾನವಾಗಿ ಕಾಣಬೇಕೆಂದು ವಿದ್ಯಾರ್ಥಿಗಳಿಗೆ ಕರೆನೀಡಿದರು. ಕಾರ್ಯಕ್ರಮದಲ್ಲಿ ಗೌರವಾನ್ವಿತ ಕುಲಪತಿಗಳಾದ ಪ್ರೊ. (ಡಾ.) ಪಿ. ಈಶ್ವರ ಭಟ್, ಶ್ರೀ ಜಿ. ವಿ. ವಿಶ್ವನಾಥ ಐ.ಎ.ಎಸ್. (ನಿವೃತ್ತ), ಅಧ್ಯಕ್ಷರು, ಬಿ.ಎಚ್.ಎಸ್., ಎಚ್.ಇ.ಎಸ್., ಶ್ರೀ ಎನ್. ಬಿ. ಭಟ್, ಐ.ಪಿ.ಎಸ್. (ನಿವೃತ್ತ), ಕಾರ್ಯದರ್ಶಿ, ಬಿ.ಎಚ್.ಎಸ್., ಎಚ್.ಇ.ಎಸ್., ಪ್ರಾಂಶುಪಾಲರು ಮತ್ತು ಆಹ್ವಾನಿತರು ಉಪಸ್ಥಿತರಿದ್ದರು. ❖

## ಪ್ರಾಮಾಣಿಕತೆ, ಕಠಿಣ ಪರಿಶ್ರಮ ಮತ್ತು ತಾಳ್ಮೆ ವೃತ್ತಿ ಬದುಕಿನ ಯಶಸ್ಸಿಗೆ ದಾರಿ: ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್. ಟಿ. ನರೇಂದ್ರ ಪ್ರಸಾದ



ಏಳನೇ ರಾಜ್ಯ ಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ-2019 ನ್ನು ಉದ್ಘಾಟಿಸಿ ಮಾತನಾಡುತ್ತಿರುವ ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್. ಟಿ. ನರೇಂದ್ರ ಪ್ರಸಾದ. ಚಿತ್ರದಲ್ಲಿ ಗೌರವಾನ್ವಿತ ಕುಲಪತಿಗಳು ಮತ್ತು ಇತರ ಗಣ್ಯರು ಉಪಸ್ಥಿತರಿರುವರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ದಿನಾಂಕ : 23 ಮತ್ತು 24 ನವೆಂಬರ್ 2019 ರಂದು ಹಮ್ಮಿಕೊಳ್ಳಲಾದ ಏಳನೇ ರಾಜ್ಯ ಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ-2019 ರ ಉದ್ಘಾಟನಾ ಸಮಾರಂಭವನ್ನು ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್. ಟಿ. ನರೇಂದ್ರ ಪ್ರಸಾದ, ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠ, ಧಾರವಾಡ ಇವರು ಉದ್ಘಾಟಿಸಿ ಮಾತನಾಡುತ್ತಾ, ಕಾನೂನು ಕಲಿಕೆಯ ನಂತರ ವಿದ್ಯಾರ್ಥಿಗಳು ಇತರೆ ಉದ್ಯೋಗಗಳನ್ನು ಅರಸಿ ಹೋಗದೆ ವಕೀಲಿಕೆಯ ಮೇಲೆ ಪ್ರಾಮಾಣಿಕವಾಗಿ ಒಲವು ತೋರಿ ಕಠಿಣ ಪರಿಶ್ರಮ ಮತ್ತು ತಾಳ್ಮೆಯಿಂದ ವೃತ್ತಿ ಬದುಕಿನಲ್ಲಿ ಯಶಸ್ಸನ್ನು ಸಾಧಿಸಲು ಕರೆ ನೀಡಿದರು. ಗೌರವ ಅತಿಥಿಗಳಾಗಿ ಆಗಮಿಸಿದ ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ. ಜಿ. ಎಮ್. ಪಾಟೀಲ, ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠ, ಧಾರವಾಡ ಇವರು ಮಾತನಾಡುತ್ತಾ, ಕಲ್ಪಿತ ನ್ಯಾಯಾಲಯಗಳಂತಹ ಸ್ಪರ್ಧೆಗಳು ವಿದ್ಯಾರ್ಥಿಗಳ ವಾಕ್‌ಚಾತುರ್ಯ,

(ನಾಲ್ಕನೇ ಪುಟಕ್ಕೆ)

## ಸಂಪಾದಕೀಯ

ನಮ್ಮ ಕಾನೂನು ವ್ಯವಸ್ಥೆಯ ಕಾರ್ಯಚರಣೆಯು ನ್ಯಾಯಸಾಧನೆಗೆ ದಾರಿಯಾಗಬೇಕೆಂದೂ, ರಾಜ್ಯವು ಸರ್ವರಿಗೂ ಸಮಾನ ನ್ಯಾಯವನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊತ್ತಿದೆಯೆಂದೂ ಹೇಳುವ ಸಾಂವಿಧಾನಿಕ ನಿರ್ದೇಶನದ (ಅನುಚ್ಛೇದ 39 A) ಇಂಗಿತವು ಕಾನೂನಿಗೂ ನ್ಯಾಯಕ್ಕೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸುವುದಲ್ಲದೆ ಕಾನೂನು ನೆರವಿನ ಧೋರಣೆಯ ತಿರುಳು ಕೂಡಾ ಆಗಿದೆ. ಜನಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡಿಸುವುದು ಕಾನೂನು ನೆರವು ಕಾರ್ಯಕ್ರಮದ ಅನಿವಾರ್ಯ ಭಾಗವಾಗಿದೆ. ಕಾನೂನು ನೆರವು ಕೇಂದ್ರ (legal aid clinic) ಮತ್ತು ಕಾನೂನು ಸಾಕ್ಷರತಾ ಆಂದೋಲನದ ಮೂಲಕ ಕಾನೂನು ವಿದ್ಯಾರ್ಥಿಗಳು ತಮ್ಮನ್ನು ತಾವು ಸಾಮುದಾಯಿಕ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುವುದು ಕಾನೂನಿನ ಸಾಮಾಜಿಕ ಪ್ರಸ್ತುತತೆಯನ್ನು, ಸುಖೀ ಪ್ರಜಾಪ್ರಭುತ್ವದ ಆಯಾಮವನ್ನು ಹಾಗೂ ಕಾನೂನು ಕಾರ್ಯಾಚರಣೆಯ ಪ್ರಕ್ರಿಯೆಯನ್ನು ಅರಿತುಕೊಳಲು ಬಹಳಷ್ಟು ಸಹಾಯ ವಾಗುತ್ತವೆ. ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಸೇವಾಸಕ್ತ ಸಂಘಟನೆಗಳೊಂದಿಗೆ ಪಾಲುಗಾರಿಕೆ ಯಿಂದ ಕಾರ್ಯ ನಿರ್ವಹಿಸುವುದು ವಿದ್ಯಾರ್ಥಿಗಳ ಕೌಶಲ್ಯವರ್ಧನೆಗೂ ಅವಕಾಶ ಮಾಡಿಕೊಡುತ್ತದೆ.

ಮೇಲಿನ ಧ್ಯೇಯಕ್ಕೆ ಪೂರಕವಾಗಿರುವ ಹಾಗೂ ಸಾರ್ವಜನಿಕರಿಗೆ ಕಾನೂನು ಮಾಹಿತಿಯನ್ನು ಪ್ರಸರಿಸುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ '**ಕಾನೂನು ಕಿರಣ**' 2019ನೇ ಇಸವಿಯ ಡಿಸೆಂಬರ್ ಸಂಚಿಕೆ ನಿಮ್ಮ ಮುಂದಿದೆ. ಈ ಸಾಕ್ಷರತಾ ಪತ್ರಿಕೆಯ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲು ಹಾಗೂ ವಿಶ್ವವಿದ್ಯಾಲಯದ ಕಾನೂನು ಸಾಕ್ಷರತಾ/ ನೆರವು ಕಾರ್ಯಕ್ರಮಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಲು ನಿಮ್ಮ ಸಲಹೆಗೆ ಸ್ವಾಗತ.

**ನಿಮ್ಮ ವಿಶ್ವಾಸಿ,**
**ಪ್ರೊ. (ಡಾ.) ಪಿ. ಈಶ್ವರ ಭಟ್**
ಕುಲಪತಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ.


### ಸಂಪಾದಕೀಯ ಮಂಡಳಿ

**ಪ್ರೊ. (ಡಾ.) ಪಿ. ಈಶ್ವರ ಭಟ್** — **ಪೋಷಕರು**
ಕುಲಪತಿಗಳು
ಕರಾಕಾವಿ, ಹುಬ್ಬಳ್ಳಿ.

**ಪ್ರೊ. ಡಾ. ಸಿ. ಎಸ್. ಪಾಟೀಲ** — **ಸಲಹೆಗಾರರು**
ಡೀನ್ ಮತ್ತು ನಿರ್ದೇಶಕರು,
ಕರಾಕಾವಿ ಕಾನೂನು ಶಾಲೆ, ಹುಬ್ಬಳ್ಳಿ.

**ಶ್ರೀ ಆರ್. ರವಿಶಂಕರ** ಭಾ.ಆ.ಸೇ. — **ಸಲಹೆಗಾರರು**
ಕುಲಸಚಿವರು
ಕರಾಕಾವಿ, ಹುಬ್ಬಳ್ಳಿ.

**ಡಾ. ಜಿ. ಬಿ. ಪಾಟೀಲ** — **ಸಲಹೆಗಾರರು**
ಕುಲಸಚಿವರು ಮೌಲ್ಯಮಾಪನ (ಪ್ರಭಾರ),
ಕರಾಕಾವಿ, ಹುಬ್ಬಳ್ಳಿ.

**ಡಾ. ಭೀಮಾಬಾಯಿ ಎಸ್. ಮೂಲಗೆ** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.

**ಡಾ. ರಂಗಸ್ವಾಮಿ ಡಿ.** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.

**ಶ್ರೀ. ಸುನಿಲ ಬಾಗಡೆ** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.


# ಸಮಸ್ಯೆ ಪರಿಹಾರದ ಸಾಧನವಾಗಿ ಸಂವಿಧಾನ


**–ಪ್ರೊ. (ಡಾ.) ಪಿ. ಈಶ್ವರ ಭಟ್**
ಕುಲಪತಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ.


ದೇಶವೊಂದರ ಸಂವಿಧಾನವು ಸಂಘಟಿತ ರಾಜಕೀಯ ಜೀವನವನ್ನು ರೂಪಿಸಿ ನಿಯಂತ್ರಿಸುವಂತೆ ದೇಶವೆದುರಿಸುವ ಸರ್ವ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸುವ ಮಹತ್ವದ ಸಾಧನವೂ ಆಗಿದೆ. ಸಾಮಾಜಿಕ ಪರಿವರ್ತನೆಯ ದೃಷ್ಟಿಯಿಂದ ಅದರ ಚಿಕಿತ್ಸಕ ದೃಷ್ಟಿ, ಮೌಲ್ಯಾಧಾರಿತ ನಿಲುವು, ಕೆಲಸಮಾಡುವ ರೀತಿ ಮತ್ತು ಶಮನ ಸಾಮರ್ಥ್ಯವು ಸಂವಿಧಾನದ ಯಶಸ್ಸಿಗೆ ಕಾರಣವಾಗುತ್ತವೆ. ಅದರ ವ್ಯಾಪಕವಾದ ಹರವು ಪರಿಹಾರ ಪಡೆಯಬೇಕಾದ ಕ್ಷೇತ್ರವನ್ನು ವಿಶಾಲಗೊಳಿಸಿದೆ. ಜನರ ಸಮಸ್ಯೆಗಳನ್ನು ಪರಿಹರಿಸುವ ಮೂಲಕವೇ ಅದು ಮತ್ತಷ್ಟು ಸಾಮರ್ಥ್ಯ ಪಡೆದು ಸಮಸ್ಯೆ ನಿಭಾಯಿಸುವ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತದೆ. ಜನಮಾನಸದೊಂದಿಗೆ ದೈನಂದಿನವಾಗಿ ಸ್ಪಂದಿಸುವುದರಿಂದ ಮತ್ತು ದೇಶದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಬೆಳವಣಿಗೆಗಳೊಂದಿಗೆ ಅನುಸಂಧಾನ ಮಾಡುವುದರಿಂದ ಸಂವಿಧಾನಕ್ಕೆ ಜೀವಂತ ಮತ್ತು ಹೃದಯವಂತ ವೈದ್ಯನಂತಿರುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲ ವರ್ಗದ ಜನರಿಗೆ ಮತ್ತು ಎಲ್ಲಾ ಸಂದರ್ಭಗಳಲ್ಲಿ ಅವರವರಿಗೆ ನೀಡಬೇಕಾದುದನ್ನು ನೀಡುತ್ತಾ ಎಲ್ಲರ ಸಂವಿಧಾನವಾಗಿ ಬೆಳೆದದ್ದು ಭಾರತದ ಸಂವಿಧಾನದ ಏಳು ದಶಕಗಳ ಯಶೋಗಾಥೆ. ಅದರ ಜೊತೆಯೇ, ಧ್ಯೇಯಗಳನ್ನು ಈಡೇರಿಸುವ ಅದರ ನಿತ್ಯಕ್ರಿಯೆ ಅದರ ಸಾಧನೆಯನ್ನು ಯಾವಾಗಲೂ ಅಪೂರ್ಣವಾಗಿಯೇ ಇಡುತ್ತದೆ. ಸಮಸ್ಯೆಗಳು ನಿರಂತರವಾಗಿರುವಂತೆ ಪರಿಹಾರದ ಕಾರ್ಯಗಳೂ ನಿರಂತರವಾಗಿರುತ್ತವೆ, ಪರಿಹಾರ ಸಾಮರ್ಥ್ಯವೂ ನಿರಂತರವಾಗಿರುತ್ತದೆ.

ಮೇಲಿನ ಅಭಿಪ್ರಾಯವನ್ನು ಸಾಬೀತು ಮಾಡಲು ಸೈದ್ಧಾಂತಿಕ, ಐತಿಹಾಸಿಕ ಮತ್ತು ವಿಶ್ಲೇಷಣಾತ್ಮಕ ವಿಚಾರಗಳನ್ನು ಈ ಕೆಳಗಿನಂತೆ ಪ್ರಸ್ತುತಪಡಿಸಬಹುದು. ಆರೋಗ್ಯಕ್ಕೆ ಔಷಧಿಯು ಹೇಗೋ ಸಾಮಾಜಿಕ ಸ್ವಾಸ್ಥ್ಯಕ್ಕೆ ಕಾನೂನು ಕೂಡಾ ಹಾಗೆಯೇ. ಸಾಮಾಜಿಕ ಯಂತ್ರದಲ್ಲಿ ದೋಷವುಂಟಾಗಿ ಕೆಲವೊಂದು ವರ್ಗದವರು ಅಥವಾ ವ್ಯಕ್ತಿಗಳು ಹಕ್ಕು ನಿರಾಕರಣೆಗೆ, ತಾರತಮ್ಯಕ್ಕೆ ಅಥವಾ ಶೋಷಣೆಗೆ ಒಳಗಾದಾಗ ಅವರನ್ನು ರಕ್ಷಿಸಿ ಪೋಷಿಸುವ ತಾಂತ್ರಿಕ ಪಾತ್ರ ಕಾನೂನಿನದು. ವರ್ಗಗಳೊಳಗಿನ ಸಂಬಂಧಗಳನ್ನು ಸುಸಂಬದ್ಧಗೊಳಿಸುವ ಸಾಮಾಜಿಕ ನ್ಯಾಯ ಸಾಧನೆಯ ಗುರಿ ಕಾನೂನು ವ್ಯವಸ್ಥೆಯದು. ದೇಶದ ಒಟ್ಟು ಕಾನೂನು ಮತ್ತು ಕಾನೂನು ವ್ಯವಸ್ಥೆಗೆ ಶಕ್ತಿ, ಮಾರ್ಗದರ್ಶನ ಮತ್ತು ನಿಯಂತ್ರಣವನ್ನು ಕೊಡುವ ಮಾತೃ ಸ್ವರೂಪಿಯೇ ಸಂವಿಧಾನ. ಜೀವನದ ಎಲ್ಲ ಕ್ರಿಯೆಗಳಿಗೆ, ಆಶಯಗಳಿಗೆ ಮತ್ತು ಸಂಸ್ಥೆಗಳಿಗೆ ಸಂವಿಧಾನವು ಆದರ್ಶ ಮೌಲ್ಯಗಳ ಚೌಕಟ್ಟು ಹಾಕುತ್ತದೆ. ಬಹು ಸಂಸ್ಕೃತಿಯ ವಿಶಾಲ ದೇಶಕ್ಕೆ ಸಮಾನ ಅವಕಾಶ ಆಧಾರಿತ 'ವಿಭಿನ್ನತೆಯಲ್ಲಿ ಏಕತೆಯ' ಮೂಲಸೂತ್ರವನ್ನು ಹೆಣೆಯುವುದು ಸಂವಿಧಾನವೇ. ಪ್ರಭುತ್ವದ ಅಧಿಕಾರವನ್ನು ಪ್ರಜಾಪ್ರಭುತ್ವದ ಆಧಾರದಲ್ಲಿ ಕಟ್ಟಿಕೊಡುವ, ಅದರ ದುರುಪಯೋಗವನ್ನು ತಡೆಯುವ ಮತ್ತು ಸದುಪಯೋಗವನ್ನು ಒತ್ತಾಯಿಸುವ ಸಾಂಸ್ಥಿಕ ಪಾತ್ರವು ಸಂವಿಧಾನದ್ದು. ಮಾನವ ಘನತೆಗೆ ತಕ್ಕುದಾದ ಮೂಲಭೂತ ಮಾನವ ಹಕ್ಕುಗಳಾದ ಸಮಾನತೆ, ಸ್ವಾತಂತ್ರ್ಯ ಮತ್ತು ಕಲ್ಯಾಣವನ್ನು ಸಮಸ್ತ ಜನರಿಗೂ ಒದಗಿಸಿಕೊಡುವ ಜವಾಬ್ದಾರಿಯೂ ಸಂವಿಧಾನದ್ದೇ. ತ್ರಿವಳಿ ನ್ಯಾಯದ ಸಮ್ಯಕ್ ದೃಷ್ಟಿಯೂ ಸಂವಿಧಾನದ ಚಿಕಿತ್ಸಕ ದೃಷ್ಟಿಯೇ. ವರ್ತಮಾನದ ನೋವುಗಳನ್ನು ಶಮನಗೊಳಿಸಿ ಉತ್ತಮ ಭವಿಷ್ಯದೆಡೆಗೆ ದೇಶವನ್ನು ಕೊಂಡೊಯ್ಯುವ ಪರಿವರ್ತನಾಶೀಲ ಬಲ ಮತ್ತು ಛಲ ಸಂವಿಧಾನದಲ್ಲಿದೆ. ಒಟ್ಟಿನಲ್ಲಿ ಅದರ ಸೈದ್ಧಾಂತಿಕ ನಿಲುವು, ಸಮಸ್ಯೆ ಪರಿಹಾರದ ನಿಲುವು.

ಐತಿಹಾಸಿಕವಾಗಿ ನೋಡಿದರೆ ನಮ್ಮ ದೇಶ ಕಂಡ ವಿದೇಶೀ ಆಳ್ವಿಕೆ ವಸಾಹತುಶಾಹಿ ಶೋಷಣೆಗಳು ಮತ್ತು ಒಡೆದು ಆಳುವ ಧೋರಣೆಗಳು ಸಮಸ್ಯೆಗಳ ಆಗರವನ್ನೇ ತಂದಿಟ್ಟವು. ಸಂಸ್ಕೃತಿ, ಆರ್ಥಿಕತೆ, ವ್ಯಾಪಾರ, ಸಾಮಾಜಿಕ ಸೌಹಾರ್ದಗಳಲ್ಲಿ ಸಂಪದ್ಭರಿತವಾದ ದೇಶವು ಕೆಲವು ದಶಕಗಳಲ್ಲಿಯೇ ಬಡತನ ಶೋಷಣೆ, ಅನಕ್ಷರತೆ, ಪರಾವಲಂಬನೆ, ಕ್ಷಾಮ ಡಾಮರಗಳಿಂದ ಬಸವಳಿಯಿತು. ಜಮೀನುದಾರಿ ವ್ಯವಸ್ಥೆ, ಊಳಿಗಮಾನ್ಯ, ಪುರುಷ ಪ್ರಧಾನತತ್ವ ಮತ್ತು ಜಾತಿಪದ್ಧತಿಯ ಅನಿಷ್ಟಗಳು ಸಮಾಜವನ್ನು ಮತ್ತಷ್ಟು ಕಂಗೆಡಿಸಿದವು. ಹತ್ತೊಂಬತ್ತನೆ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ಚಿಂತಕರು ಸಮಸ್ಯೆ ಪರಿಹಾರದ ಮಾರ್ಗವನ್ನು ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಂಡುಕೊಳ್ಳಲು ಯತ್ನಿಸಿದರು. ಸ್ವಾತಂತ್ರ್ಯ ಹೋರಾಟಗಾರರು–ಕ್ರಾಂತಿಕಾರರಿರಲಿ, ಅಹಿಂಸಾವಾದಿಗಳಿರಲಿ–ದೇಶದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ ಸ್ಪಂದಿಸಿದರು. ರಾಜಕೀಯ ಸ್ವಾತಂತ್ರ್ಯದ ದಾರಿಯನ್ನು ರೂಪಿಸುವುದರೊಂದಿಗೆ ಗಾಂಧೀಜಿಯವರು ಅಸ್ಪೃಶ್ಯತೆಯ ನಿವಾರಣೆ, ಹಿಂದೂ ಮುಸ್ಲಿಂ ಸಾಮರಸ್ಯ, ಸ್ತ್ರೀಸಮಾನತೆ, ಅನಕ್ಷರತೆಯ ನಿವಾರಣೆ, ಮದ್ಯಪಾನ ವರ್ಜ್ಯ, ಗ್ರಾಮ ಸುಧಾರಣೆ, ಸ್ವಚ್ಛತೆ, ಆರೋಗ್ಯ, ಆರ್ಥಿಕ ಸಮಾನತೆಯ ನೀತಿ ರೀತಿಗಳನ್ನು ಹೇಳುತ್ತಾ ಸಮಸ್ಯೆಗಳ ಪರಿಹಾರವನ್ನು ಸಮಾಜದ ಅಗ್ರ ಕರ್ತವ್ಯವನ್ನಾಗಿ ಮಾಡಿಕೊಂಡರು. ಸಮಾಜವಾದ ಆಧಾರಿತ ನೀತಿಗಳಾದ ಭೂಸುಧಾರಣೆ, ರೈತ ರಕ್ಷಣೆ, ಕಾರ್ಮಿಕ ನ್ಯಾಯ, ನಿರುದ್ಯೋಗ ನಿವಾರಣೆ, ಮತ್ತು ಶೋಷಣೆಗಳ ಅಂತ್ಯ ಇತ್ಯಾದಿಗಳು ಸಮಸ್ಯೆ ಪರಿಹಾರದ ಮಾರ್ಗಗಳಾಗಿದ್ದವು. ಈ ಎಲ್ಲ ಸಮಸ್ಯೆ ಪರಿಹಾರಕ ಧೋರಣೆಯನ್ನು ಸಂವಿಧಾನದ ತಿರುಳನ್ನಾಗಿ ಮಾಡುವುದರ ಮೂಲಕವೇ ಸಂವಿಧಾನ ನಿರ್ಮಾತೃಗಳು ಭಾರತದ ಸಂವಿಧಾನವನ್ನು ಬರಿಯ ಕಾನೂನಿನ ಸಲಕರಣೆಯಾಗಿಸದೆ ಸಾಮಾಜಿಕ ಪರಿವರ್ತನೆಯ ಸಾಧನವಾಗಿಸಿದರು. ಸಂವಿಧಾನವನ್ನು ಸಮಾಜ, ಸುಧಾರಣೆಯ ಅಡಿಪಾಯವಾಗಿ ನೋಡುವುದು ಐತಿಹಾಸಿಕ ದೃಷ್ಟಿಯಿಂದ ಅಗತ್ಯವೆಂಬುದನ್ನು ಸಂವಿಧಾನ ರಚನಾ ಸಭೆಯ ಸದಸ್ಯರಾದ ಡಾ. ಎಸ್. ರಾಧಾಕೃಷ್ಣನ್‌ರವರ ಮಾತಿನಲ್ಲಿ ಕಾಣಬಹುದು: "ಭಾರತೀಯ ಸಮಾಜದ ವಿನ್ಯಾಸದಲ್ಲಿ ಮೂಲಭೂತ ಬದಲಾವಣೆಯನ್ನು ತರಲು ಮತ್ತು ನಿರಂಕುಶತೆಯ ಪ್ರತಿಯೊಂದು ಪಳೆಯುಳಿಕೆಯನ್ನು ಹಾಗೂ ಅಜೈವಿಕ ಪರಂಪರೆಯ ಪ್ರತಿಯೊಂದು ವಂಶಾವಳಿಯನ್ನು ಉಚ್ಚಾಟಿಸಲು ನಾವು ಆಶಿಸುತ್ತೇವೆ".

ವಿಶ್ಲೇಷಣಾತ್ಮಕವಾಗಿ ಕಣ್ಣು ಹಾಯಿಸಿದರೆ ಹೆಜ್ಜೆ ಹೆಜ್ಜೆಗೂ ಕಾಣಿಸುವುದು ಸಮಸ್ಯೆಗಳ ಸರಮಾಲೆಗಳಿಗೆ ಸೂಕ್ತ ಪರಿಹಾರಗಳನ್ನು ನೀಡುವ ಸಾರಯುಕ್ತ ತತ್ವಗಳು ಮತ್ತು ಅವುಗಳನ್ನು ವ್ಯಾಖ್ಯಾನಿಸುವ ಮತ್ತು ನಿರೂಪಿಸುವ ಪುಂಖಾನುಪುಂಖ ಬೋಧಪ್ರದ ತೀರ್ಪುಗಳು. ವೈಯಕ್ತಿಕತೆಯ ಖಾಸಗಿತನವಿರಲಿ, ಕುಟುಂಬದ ಜಗಳವಿರಲಿ, ಸಂಸ್ಥೆಗಳೊಳಗಿನ ಸಂಘರ್ಷಗಳಿರಲಿ,

(ನಾಲ್ಕನೇ ಪುಟಕ್ಕೆ)

# ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೋ) ತಿದ್ದುಪಡಿ ಕಾಯ್ದೆ, 2019

ಡಾ. ಭೀಮಾಬಾಯಿ. ಎಸ್. ಮೂಲಗೆ
ಸಹಾಯಕ ಪ್ರಾಧ್ಯಾಪಕರು, ಕರಾಕಾವಿ, ಹುಬ್ಬಳ್ಳಿ

**ಪ್ರಸ್ತಾವನೆ**

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳು ಸಮಾಜದ ಸ್ವಾಸ್ಥ್ಯಕ್ಕೆ ಕಂಟಕ ಪ್ರಾಯವಾಗಿ ಪರಿಣಮಿಸಿರುವುದರ ಜೊತೆಗೆ ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿರುವುದು ಆಘಾತಕಾರಿ ಅಂಶವಾಗಿದೆ. ಮಕ್ಕಳ ಮೇಲಿನ ಲೈಂಗಿಕ ಶೋಷಣೆ ಮತ್ತು ಲೈಂಗಿಕ ದುರುಪಯೋಗಗಳು ಹೀನ ಕೃತ್ಯಗಳಾಗಿವೆ. ಮಕ್ಕಳ ಹಿತದೃಷ್ಟಿಯನ್ನು ಕಾಪಾಡಲು ವಿಶ್ವಸಂಸ್ಥೆಯು ಹಮ್ಮಿಕೊಂಡ ಸಾಮಾನ್ಯ ಸಭೆಯ ಅನುಮೋದಿತಗೊಂಡ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸರ್ಕಾರವು ದಿನಾಂಕ 11 ಡಿಸೆಂಬರ್ 1992ರಂದು ಸಹಿ ಮಾಡಿದೆ. ಈ ಒಡಂಬಡಿಕೆಯ ಪ್ರಕಾರ ಮಕ್ಕಳ ಸೂಕ್ತವಾದ ಬೆಳವಣಿಗೆಗೆ ಮಕ್ಕಳ (ಬಾಲಕ / ಬಾಲಕಿ) ಖಾಸಗಿತನ ಮತ್ತು ಗೌಪ್ಯತೆಯನ್ನು ಪ್ರತಿಯೊಬ್ಬರೂ ಎಲ್ಲಾ ವಿಧದಲ್ಲೂ ಮತ್ತು ಮಗುವನ್ನು ಒಳಗೊಂಡ ಎಲ್ಲಾ ಹಂತಗಳ ನ್ಯಾಯ ಪ್ರಕ್ರಿಯೆಯಲ್ಲಿ ರಕ್ಷಿಸುವುದು ಮತ್ತು ಗೌರವಿಸುವುದು ಅವಶ್ಯಕ. ಈ ಒಡಂಬಡಿಕೆಗೆ ಬದ್ಧವಾದ ಆಯಾ ಸರಕಾರಗಳು ಮಕ್ಕಳನ್ನು ಕಾನೂನುಬಾಹಿರ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಲು ಪ್ರೋತ್ಸಾಹಿಸುವುದು ಅಥವಾ ಒತ್ತಾಯಿಸುವುದು; ವೇಶ್ಯಾವೃತ್ತಿ ಅಥವಾ ಕಾನೂನುಬಾಹಿರ ಲೈಂಗಿಕ ಚಟುವಟಿಕೆಗಳ ಪ್ರಯೋಗಗಳಿಗೆ ಮಕ್ಕಳನ್ನು ಬಳಸಿಕೊಳ್ಳುವುದು ಮತ್ತು ಅಶ್ಲೀಲ ಚಿತ್ರಣಕ್ಕಾಗಿ ಮತ್ತು ಸಾಮಗ್ರಿಗಳ ತಯಾರಿಯಲ್ಲಿ ಮಕ್ಕಳನ್ನು ಬಳಸಿ ಶೋಷಿಸುವುದನ್ನು ನಿಷೇಧಿಸುವ ಕರ್ತವ್ಯ ಹೊಂದಿದೆ.

ಈ ನಿಟ್ಟಿನಲ್ಲಿ ಸರಕಾರವು ಲೈಂಗಿಕ ದೌರ್ಜನ್ಯದಿಂದ ಮಕ್ಕಳನ್ನು ಸಂರಕ್ಷಿಸಲು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೋ) ಕಾಯ್ದೆ, 2012 ನ್ನು 11 ನೇ ನವೆಂಬರ್ 2012 ರಂದು ಜಾರಿಗೆ ತಂದಿತು. ಭೇದಕ ಲೈಂಗಿಕ ಹಲ್ಲೆ ಮತ್ತು ತೀವ್ರ ಸ್ವರೂಪದ ಭೇದಕ ಲೈಂಗಿಕ ಹಲ್ಲೆಗಳಂತಹ ಅಪರಾಧಗಳಿಗೆ ಮರಣದಂಡನೆಯನ್ನು ಸೂಚಿಸಿದೆ. ಹಾಗೇ ಒಂದು ವೇಳೆ ಮಗು, ಪೊಲೀಸ್ ಅಧಿಕಾರಿ, ಮಿಲಿಟರಿ ಅಧಿಕಾರಿ ಅಥವಾ ರಕ್ಷಣಾಧಿಕಾರಿ, ಸಾರ್ವಜನಿಕ ಅಧಿಕಾರಿ ಅಥವಾ ಸಂಬಂಧಿಕರಿಂದ ಸಾಮೂಹಿಕ ಭೇದಕ ಲೈಂಗಿಕ ಹಲ್ಲೆಗೊಳಗಾದರೆ ಅಥವಾ ಲೈಂಗಿಕ ಹಲ್ಲೆಗೊಳಗಾದಂತಹ ಮಗು 12 ವರ್ಷಕ್ಕಿಂತ ಕಡಿಮೆಯಿದ್ದಲ್ಲಿ ಅಥವಾ ಮಕ್ಕಳ ಲೈಂಗಿಕ ಫೋಟೋ ಅಥವಾ ವಿಡಿಯೋವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಡುವುದು, ಅದನ್ನು ತೆಗೆದು ಹಾಕದಿರುವುದು ಅಥವಾ ನಾಶಪಡಿಸದಿರುವುದು ಅಥವಾ ಅಶ್ಲೀಲತೆಯಿಂದ ಕೂಡಿದ ವಸ್ತುವನ್ನು ವರದಿ ಮಾಡಲು ವಿಫಲವಾಗುವುದು, ಹಾರ್ಮೋನ್ ಅಥವಾ ಯಾವುದೇ ರೀತಿಯ ರಸಾಯನಿಕ ಪದಾರ್ಥವನ್ನು ನೀಡಿ ಮಕ್ಕಳು ಶೀಘ್ರವಾಗಿ ಪ್ರಾಯಕ್ಕೆ ಬರುವಂತೆ ಮಾಡುವಂತಹ ಗಂಭೀರ ಕೃತ್ಯಗಳಿಗೆ ಕಠಿಣ ಶಿಕ್ಷೆಯನ್ನು ಸೂಚಿಸುವ ಉದ್ದೇಶದಿಂದ 2019 ರಲ್ಲಿ ಸರಕಾರವು ಪೋಕ್ಸೋ ಕಾಯ್ದೆಗೆ ತಿದ್ದುಪಡಿ ಯನ್ನು ತಂದಿದೆ.

**ಪೋಕ್ಸೋ ತಿದ್ದುಪಡಿ ಕಾಯ್ದೆ, 2019**

ಲೈಂಗಿಕ ಹಲ್ಲೆ, ಲೈಂಗಿಕ ಕಿರುಕುಳ ಮತ್ತು ಹಿಂಸೆಗಳಿಂದ ಮಕ್ಕಳನ್ನು ರಕ್ಷಿಸುವುದು, ನ್ಯಾಯಾಂಗದ ಮೂಲಕ ಪ್ರತಿ ಹಂತದಲ್ಲೂ ಮಗುವಿನ ಆಸಕ್ತಿಯನ್ನು ಕಾಪಾಡುವುದು, ಕಾಯ್ದೆಯ ಪ್ರಕಾರ ಮಗು ಸ್ನೇಹಿ ವರದಿಯನ್ನು ತಯಾರು ಮಾಡುವುದು, ಪುರಾವೆಗಳ ದಾಖಲೆ, ತನಿಖೆ ಮತ್ತು ನಿಯೋಜಿತವಾದ ವಿಶೇಷ ನ್ಯಾಯಾಲಯಗಳ ಮೂಲಕ ಅಪರಾಧಗಳ ತ್ವರಿತ ವಿಚಾರಣೆಗೆ ಸಂಬಂಧಿಸಿದ ಕಾರ್ಯ ವಿಧಾನಗಳನ್ನು ಸೇರಿಸುವುದರ ಮೂಲಕ ಮಕ್ಕಳನ್ನು ರಕ್ಷಿಸುವುದು ಪೋಕ್ಸೋ ತಿದ್ದುಪಡಿ ಕಾಯ್ದೆ, 2019ರ ಪ್ರಮುಖ ಉದ್ದೇಶವಾಗಿದ್ದು, ಮಗುವಿನ ದೈಹಿಕ, ಭಾವನಾತ್ಮಕ, ಬೌದ್ಧಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಅನುವು ಮಾಡಿಕೊಡುವುದಾಗಿದೆ. ಈ ಕಾಯ್ದೆಯು ಒಟ್ಟಾರೆಯಾಗಿ ಮಗುವಿನ ಮೇಲಿನ ಎಲ್ಲ ತರಹದ ಲೈಂಗಿಕ ದೌರ್ಜನ್ಯವನ್ನು ನಿಷೇಧಿಸುತ್ತದೆ. ಇಲ್ಲಿ ಮಗು ಎಂಬ ವಿಸ್ತೃತ ಅರ್ಥದಡಿಯಲ್ಲಿ 18 ವರ್ಷ ವಯಸ್ಸಿನ ಒಳಗೆ ಬರುವ ಎಲ್ಲ ಹೆಣ್ಣು ಮತ್ತು ಗಂಡುಮಕ್ಕಳು ಬರುತ್ತಾರೆ. ಲೈಂಗಿಕ ದೌರ್ಜನ್ಯ, ಲೈಂಗಿಕ ಕಿರುಕುಳ ಮತ್ತು ಅಶ್ಲೀಲ ಚಿತ್ರ ತಯಾರಿ ವಿರುದ್ಧ ರಕ್ಷಿಸಲು ಮತ್ತು ಈ ರೀತಿಯ ಹಾಗೂ ಇದಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ನಡೆದಾಗ ವಿಚಾರಣೆ ನಡೆಸಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ಸಲುವಾಗಿ ಈ ಕಾಯ್ದೆಯು ಸಂವಿಧಾನದ ಅನುಚ್ಛೇದ 15(3) ಪ್ರಕಾರ ಮಕ್ಕಳಿಗಾಗಿ ವಿಶೇಷ ಅವಕಾಶಗಳನ್ನು ಒದಗಿಸಲು ಸರ್ಕಾರಕ್ಕೆ ಅಧಿಕಾರವಿತ್ತಿದೆ.

ಭೇದಕ ಲೈಂಗಿಕ ಹಲ್ಲೆ ಮತ್ತು ತೀವ್ರತರವಾದ ಭೇದಕ ಲೈಂಗಿಕ ಹಲ್ಲೆ ಕಾಯ್ದೆಗೆ ತಿದ್ದುಪಡಿ ಮಾಡುವುದರ ಮೂಲಕ ಕಲಂ 3 ಮತ್ತು 5ರ ಅಡಿಯಲ್ಲಿ ಬರುವ ಭೇದಕ ಲೈಂಗಿಕ ಹಲ್ಲೆ ಮತ್ತು ತೀವ್ರತರವಾದ ಭೇದಕ ಲೈಂಗಿಕ ಹಲ್ಲೆ ಎಂಬ ವ್ಯಾಖ್ಯೆಗಳಿಗೆ ವಿಸ್ತೃತ ಅರ್ಥವನ್ನು ನೀಡಿ, ಲೈಂಗಿಕ ಹಲ್ಲೆಯಿಂದ ಮಗು ಮೃತಪಟ್ಟರೆ ಅಥವಾ ಪ್ರಕೃತಿ ವಿಕೋಪದ ಸಮಯದಲ್ಲಿ ಮಗುವಿನ ಮೇಲೆ ಲೈಂಗಿಕ ಹಲ್ಲೆಗಳಂತಹ ಹೊಸ ಅಂಶಗಳನ್ನು ವ್ಯಾಖ್ಯೆಗೆ ಸೇರಿಸಲಾಗಿದೆ. ತೀವ್ರತರವಾದ ಭೇದಕ ಲೈಂಗಿಕ ಹಲ್ಲೆ ಮಾಡಿದ ಅಪರಾಧಿಗೆ 20 ವರ್ಷದಿಂದ ಆಜೀವ ಕಾರಾವಾಸ ಅಥವಾ ಮರಣದಂಡನೆಯವರೆಗೆ ವಿಸ್ತರಿಸಬಹುದಾದ ಶಿಕ್ಷೆಯನ್ನು ಹೇಳಿದೆ.

ಮಗುವಿನ ಮೇಲೆ ಸಂಭೋಗದಂತಹ ಲೈಂಗಿಕ ಹಲ್ಲೆಗೆ 20 ವರ್ಷದಿಂದ ಆಜೀವ ಕಾರಾವಾಸ ಮತ್ತು ದಂಡ ಶಿಕ್ಷೆಯನ್ನು ಹೇಳಿದೆ. ಹಾಗೇ 12 ವರ್ಷ ವಯಸ್ಸಿನ ಒಳಗಿನ ಹೆಣ್ಣು ಮಗುವಿನ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದರೆ ಅಂತಹ ಆರೋಪಕ್ಕೆ ಆಜೀವ ಕಾರಾವಾಸ ಮತ್ತು ದಂಡ ಅಥವಾ ಮರಣ ದಂಡನೆಯವರೆಗೆ ವಿಸ್ತರಿಸಬಹುದಾದ ಶಿಕ್ಷೆಯನ್ನು ಹೇಳಿದೆ (ಕಲಂ 4).

ಕಲಂ 5 ಪ್ರಕಾರ ಮಗುವಿನೊಂದಿಗೆ ಸಂಭೋಗದಂತಹ ಬಲಾತ್ಕಾರಯುತ ಲೈಂಗಿಕ ಹಲ್ಲೆಯನ್ನು ಮಾಡಿದ ಯಾವುದೇ: (ಎ) ಪೊಲೀಸ್ ಅಧಿಕಾರಿ; (ಬಿ) ಮಿಲಿಟರಿ ಅಧಿಕಾರಿ ಅಥವಾ ರಕ್ಷಣಾಧಿಕಾರಿ; (ಸಿ) ಸಾರ್ವಜನಿಕ ಅಧಿಕಾರಿ; (ಡಿ) ಯಾವುದೇ ಮೇಲ್ವಿಚಾರಣೆ ಅಥವಾ ಕಚೇರಿಯ ಜೈಲು ಸಿಬ್ಬಂದಿ ಅಥವಾ ರಿಮಾಂಡ್ ಹೋಮ್ ಅಥವಾ ರಕ್ಷಣಾಗೃಹದ ಸಿಬ್ಬಂದಿ; (ಇ) ಖಾಸಗಿ ಅಥವಾ ಸರ್ಕಾರಿ ದವಾಖಾನೆಯ ಮೇಲ್ವಿಚಾರಣೆ ಅಥವಾ ಕಚೇರಿಯ ಸಿಬ್ಬಂದಿ; (ಎಫ್) ಮಗುವಿನೊಂದಿಗೆ ಮಾರಣಾಂತಿಕವಾದ ಶಸ್ತ್ರಾಸ್ತ್ರಗಳನ್ನು, ಬೆಂಕಿ, ಕತ್ತಿ, ಕೊಡಲಿಯನ್ನು ಉಪಯೋಗಿಸಿ ಉದ್ರೇಕಿಸುವ ಲೈಂಗಿಕ ಹಲ್ಲೆಯನ್ನು ಮಾಡಿರುವಲ್ಲಿ; ಅಥವಾ (ಜಿ) ಮಗುವಿನ ಮೇಲೆ ತೀವ್ರ ಸ್ವರೂಪದ ಗಾಯದ ಮೂಲಕ ಹಾನಿಯಾಗುವಂತೆ ಮಗುವಿನ ಗುಪ್ತಾಂಗಗಳಿಗೆ ಗಾಯವಾಗುವಂತೆ ಲೈಂಗಿಕವಾದ ಹಲ್ಲೆಯನ್ನು ಮಾಡಿದಲ್ಲಿ; (ಎಚ್) ಮಗುವಿನೊಂದಿಗೆ ಉದ್ರೇಕಗೊಂಡು ಲೈಂಗಿಕ ಹಲ್ಲೆಯನ್ನು ಮಾಡಿದಲ್ಲಿ; (ಐ) ಮಗುವು ಮಾನಸಿಕವಾಗಿ ಮತ್ತು ಶಾರೀರಕವಾಗಿ ದುರ್ಬಲವಾಗಿರುವುದರ ಲಾಭವನ್ನು ಪಡೆದು ಅದರ ಮೇಲೆ ಲೈಂಗಿಕ ಹಲ್ಲೆಯನ್ನು ಮಾಡಿದಲ್ಲಿ; (ಜೆ) ಒಂದಕ್ಕಿಂತ ಹೆಚ್ಚು ಬಾರಿ ಮಗುವಿನ ಮೇಲೆ ಅತ್ಯಾಚಾರವನ್ನು ಮಾಡಿದಲ್ಲಿ; (ಕೆ) 16 ವರ್ಷದ ಒಳಗಿರುವ ಮಗುವಿನ ಮೇಲೆ ಅತ್ಯಾಚಾರ ಪ್ರಯತ್ನದಂಥ ಲೈಂಗಿಕ ಹಲ್ಲೆಯನ್ನು ಮಾಡಿದಲ್ಲಿ; (ಎಲ್) ಮಗುವಿನ ಸಂಬಂಧಿಕ; (ಎಮ್) ಯಾವುದೇ ಸ್ವಾಮಿತ್ವನಾತೆಯಿಂದ ಮ್ಯಾನೇಜ್‌ಮೆಂಟ್‌ನಾತೆಯಿಂದ ಕಚೇರಿಯ ಸಿಬ್ಬಂದಿ (ಎನ್) ಮಗುವಿಗೆ ಸಂಬಂಧಿಸಿರುವ ಅವಳ ಕುಟುಂಬದ ವ್ಯಕ್ತಿ ಮತ್ತು (ಒ) ಬಾಲಕಿಯು ಗರ್ಭಿಣಿಯೆಂದು ತಿಳಿದೂ ಸಂಭೋಗದಂಥ ಲೈಂಗಿಕಾಸಕ್ತಿಯಿಂದ ಹಲ್ಲೆ ಮಾಡಿದಲ್ಲಿ; (ಆರ್) ಮಗುವಿನ ಮೇಲೆ ಅತ್ಯಾಚಾರವೆಸಗಿ ಮಗುವನ್ನು ಕೊಲೆಮಾಡಲು ಪ್ರಯತ್ನಪಟ್ಟರೆ; (ಪಿ) ಕೋಮು ವಿವಾದಕ್ಕೆ ಸಂಬಂಧಪಟ್ಟು ಮಗುವಿನ ಮೇಲೆ ಉದ್ರೇಕಿಸುವ ಲೈಂಗಿಕ ಹಲ್ಲೆಯನ್ನು ಮಾಡಿದಲ್ಲಿ; (ಕ್ಯು) ಲೈಂಗಿಕತೆಯ ಅಪರಾಧಕ್ಕೆ ಈ ಮೊದಲು ಶಿಕ್ಷೆಗೊಳಪಟ್ಟಂತಹ ವ್ಯಕ್ತಿ (ಎಸ್) ಮಗುವಿನ ಮೇಲೆ ಉದ್ರೇಕಿಸುವ ಲೈಂಗಿಕ ಹಲ್ಲೆಯನ್ನು ಮಾಡಿ ಅವಳನ್ನು ಸಾರ್ವಜನಿಕವಾಗಿ ವಿವಸ್ತ್ರಳನ್ನಾಗಿ ನಿಲ್ಲಿಸುವುದಕ್ಕೆ ಉದ್ರೇಕಿಸುವ ಲೈಂಗಿಕ ಹಲ್ಲೆಯನ್ನು ಮಾಡಿದಂತಹ ವ್ಯಕ್ತಿಗೆ 20 ವರ್ಷದಿಂದ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಶಿಕ್ಷೆಯನ್ನು ಹೇಳಲಾಗಿದೆ (ಕಲಂ 6). ಮಗುವಿನೊಂದಿಗೆ ತೀವ್ರತರವಾದ ಲೈಂಗಿಕ ಹಲ್ಲೆ ಮಾಡಿದಲ್ಲಿ 20 ವರ್ಷದಿಂದ ಆಜೀವ ಕಾರಾಗ್ರಹ ವಾಸ ಅಥವಾ ಮರಣದಂಡನೆಯವರೆಗೆ ವಿಸ್ತರಿಸಬಹುದಾದ ಶಿಕ್ಷೆಯನ್ನು ಹೇಳಲಾಗಿದೆ (ಕಲಂ 10).

ಮಗುವನ್ನು ಅಥವಾ ಮಕ್ಕಳನ್ನು ಅಶ್ಲೀಲ ಚಿತ್ರಗಳ ರಚನೆಯ ಮೂಲಕವಾಗಿ ದುರುದ್ದೇಶಕ್ಕೆ ಬಳಸಿದ್ದಲ್ಲಿ ಅಂಥವರನ್ನು ಕನಿಷ್ಠ 5 ವರ್ಷಗಳವರೆಗಿನ ಕಾರಾವಾಸ ಮತ್ತು ದಂಡವನ್ನು ವಿಧಿಸಬಹುದಾಗಿದೆ (ಕಲಂ 14). ಮಗುವನ್ನು ಅಥವಾ ಮಕ್ಕಳನ್ನು ಅಶ್ಲೀಲ ಚಿತ್ರಗಳ ರಚನೆಯ ಅಪರಾಧಕ್ಕಾಗಿ ನೇರವಾಗಿ ಬಳಸಿದ್ದಲ್ಲಿ 10 ವರ್ಷ ಕಡಿಮೆಯಿಲ್ಲದಷ್ಟು (16 ವರ್ಷ ಕೆಳಗಿನ ಮಗುವನ್ನು ಬಳಸಿದ್ದಲ್ಲಿ 20 ವರ್ಷ ಕಡಿಮೆಯಿಲ್ಲದಷ್ಟು) ಮತ್ತು ಅದನ್ನು ಜೀವಾವಧಿ ಶಿಕ್ಷೆಯವರೆಗೆ ವಿಸ್ತರಿಸಬಹುದಾದ ಮತ್ತು ದಂಡವನ್ನು ವಿಧಿಸಬಹುದಾಗಿದೆ. ಮಗುವನ್ನು ಅಥವಾ ಮಕ್ಕಳನ್ನು ಅಶ್ಲೀಲ ಚಿತ್ರಗಳ ರಚನೆಯ ಅಪರಾಧಕ್ಕಾಗಿ ನೇರವಾಗಿ ತೀವ್ರತರವಾದ ಲೈಂಗಿಕ ಹಲ್ಲೆಗೆ ಬಳಸಿದ್ದಲ್ಲಿ 20 ವರ್ಷದಿಂದ ಆಜೀವ ಕಾರಾವಾಸ ಅಥವಾ ಮರಣದಂಡನೆಯವರೆಗೆ ವಿಸ್ತರಿಸಬಹುದಾದ ಶಿಕ್ಷೆಯನ್ನು ಹೇಳಲಾಗಿದೆ.

ಮಕ್ಕಳಿಗೆ ಹಾರ್ಮೋನ್ ಅಥವಾ ಯಾವುದೇ ರೀತಿಯ ರಾಸಾಯನಿಕ ಪದಾರ್ಥವನ್ನು ನೀಡಿ ಶೀಘ್ರವಾಗಿ ಪ್ರಾಯಕ್ಕೆ ಬರುವಂತೆ ಮಾಡುವ ಕೃತ್ಯಕ್ಕೆ 20 ವರ್ಷದಿಂದ ಆಜೀವ ಕಾರಾವಾಸ ಅಥವಾ ಮರಣದಂಡನೆಯವರೆಗೆ ವಿಸ್ತರಿಸಬಹುದಾದ ಶಿಕ್ಷೆಯನ್ನು ಹೇಳಲಾಗಿದೆ (ಕಲಂ 9). ಮಕ್ಕಳ ಲೈಂಗಿಕ ಫೋಟೋ ಅಥವಾ ವಿಡಿಯೋವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಡುವುದು, ಅದನ್ನು ತೆಗೆದುಹಾಕಲು, ನಾಶಪಡಿಸಲು ವಿಫಲವಾದರೆ ಅಥವಾ ಅಶ್ಲೀಲತೆಯಿಂದ ಕೂಡಿದ ವಸ್ತುವನ್ನು ವರದಿಮಾಡಲು ವಿಫಲವಾದರೆ. ಅಶ್ಲೀಲತೆಯಿಂದ ಕೂಡಿದ ಚಿತ್ರಣವನ್ನು ವರದಿ ಮಾಡುವುದರನ್ನು ಹೊರತುಪಡಿಸಿ ಪ್ರದರ್ಶಿಸುವುದು, ಹಸ್ತಾಂತರಿಸುವದು ಅಥವಾ ಹಂಚುವುದು ಮಾಡಿದ ವ್ಯಕ್ತಿಗೆ 5 ರಿಂದ 6 ವರ್ಷಗಳ ಶಿಕ್ಷೆಯನ್ನು ಹೇಳಲಾಗಿದೆ.

ಭೇದಕ ಲೈಂಗಿಕ ಹಲ್ಲೆ ಮತ್ತು ತೀವ್ರತರವಾದ ಭೇದಕ ಲೈಂಗಿಕ ಹಲ್ಲೆಗೆ ಸಂಬಂಧಿಸಿದಂತೆ ಇಡೀ ಮನುಕುಲವನ್ನೇ ಬೆಚ್ಚಿಬೀಳಿಸುವಂತಹ ಕೆಲವೊಂದು ಪ್ರಕರಣಗಳನ್ನು ಇಲ್ಲಿ ಹೇಳಲಾಗಿದೆ.

**ಕಥುವಾ ಅತ್ಯಾಚಾರ ಮತ್ತು ಕೊಲೆ ಪ್ರಕರಣ**

ಕಥುವಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಜಮ್ಮು ಕಾಶ್ಮೀರದ ಕಥುವಾ ಜಿಲ್ಲೆಯ 8 ವರ್ಷದ ಆಸಿಫಾ ಎಂಬ

(ನಾಲ್ಕನೇ ಪುಟಕ್ಕೆ)

## ಸಮಸ್ಯೆಗೆ ಪರಿಹಾರದ ಸಾಧನವಾಗಿ ಸಂವಿಧಾನ

(ಎರಡನೇ ಪುಟದಿಂದ)

ಸಮುದಾಯಗಳೊಳಗಿನ ದೀರ್ಘಕಾಲಿಕ ಭಾವಸ್ಫೋಟಕ ಧಾರ್ಮಿಕ ಜಿಜ್ಞಾಸೆಗಳಿರಲಿ, ರಾಜ್ಯಗಳೊಳಗಿನ ನೆಮ್ಮದಿಯನ್ನು ಕದಡುವ ನದಿ ನೀರಿನ ವಿವಾದಗಳಿರಲಿ, ನಿರಾಕರಣೆಗೊಳಗಾದ ವರ ಸ್ತ್ರೀಯರು, ಮಕ್ಕಳು, ದಲಿತರು, ಬುಡಕಟ್ಟು ಪಂಗಡದವರು, ಹಿಂದುಳಿದವರು, ಅಲ್ಪಸಂಖ್ಯಾತರು, ಬಡವರು–ಹಕ್ಕುಗಳ ರಕ್ಷಣೆಯ ಸಂಗತಿಯಿರಲಿ, ವಿಷಾನಿಲ ಮತ್ತು ಪರಿಸರ ಮಾಲಿನ್ಯದ ಸಂತ್ರಸ್ತರ ಅಹವಾಲುಗಳಿರಲಿ, ಪಕ್ಷಾಂತರದ ಕಕ್ಷಿಗಳೇ ಇರಲಿ, ಇವುಗಳಿಗೆಲ್ಲ ತಾರ್ಕಿಕ ಅಂತ್ಯವನ್ನು ಕಾಣಿಸುವ ತೀರ್ಪುಗಳು ಸಂವಿಧಾನದ ಆಧಾರದಲ್ಲಿ ಬರುತ್ತವೆ. ವಿಷಯಗಳ ಸಾಮಾಜಿಕ ಮಹತ್ವ, ವ್ಯಾಪ್ತಿ, ಗಹನತೆ ಮತ್ತು ದೂರಗಾಮಿ ಪರಿಣಾಮಗಳನ್ನು ನೋಡಿದರೆ ಸಮಸ್ಯೆ ಪರಿಹಾರದ ಕ್ರಿಯೆಯು ತಾತ್ಕಾಲಿಕ ಅಥವಾ ತಾತ್ಪೂರ್ತಿಕವಲ್ಲ. ಅದು ಯುಗ ಯುಗಗಳುದ್ದಕ್ಕು ಅನ್ವಯಗೊಳ್ಳಬಹುದಾದ ಸಾರ್ವಕಾಲಿಕ ಸತ್ಯ, ಮೌಲ್ಯ ಮತ್ತು ಅನುಭವಗಳು ಒಡ್ಡುವ ಒರೆಗಲ್ಲಿಗೆ ವಾಸ್ತವಿಕತೆಯನ್ನು ಹಚ್ಚಿ ಪರೀಕ್ಷಿಸುವ ಸೂಕ್ಷ್ಮಕಾರ್ಯ. ಸಮಸ್ಯೆ ಪರಿಹಾರಕ್ಕೆ ಬೇಕಾದ ಮೌಲ್ಯಗಳ ಮಾದರಿಗಳು, ಪ್ರಕ್ರಿಯೆಯ ರೀತಿಗಳು ಮತ್ತು ಪರಿಹಾರ ನೀಡುವ ಅಧಿಕರಣಗಳ ವ್ಯವಸ್ಥೆ– ಇವೆಲ್ಲವುಗಳು ಸಮಸ್ಯೆ ಪರಿಹಾರದ ಉದ್ದೇಶವನ್ನು ಕೇಂದ್ರ ಬಿಂದುವಾಗಿಸಿ ಕಾರ್ಯನಿರ್ವಹಣೆಗೆ ನೆರವಾಗಿಸುತ್ತವೆ. ಪ್ರಸ್ತಾವನೆಯಲ್ಲಿ ಹೇಳಿದ ಉನ್ನತ ಆಕಾಂಕ್ಷೆ ಮತ್ತು ಆದರ್ಶಗಳ ದಿಕ್ಕಿಗೆ ಪಯಣಿಸಲು ಉದ್ದೇಶಿಸಿದ ಮತ್ತು ಸಮಸ್ತ ಜನತೆಯಿಂದ ಕಟಿಬದ್ಧವಾದ ರಾಷ್ಟ್ರಕಟ್ಟುವ ಕೈಂಕರ್ಯಕ್ಕೆ ಅನಿವಾರ್ಯವಾದ ಪರಿಕಲ್ಪನೆಗಳು–ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ವೈಯಕ್ತಿಕ ಘನತೆ ಮತ್ತು ದೇಶದ ಐಕ್ಯತೆ–ಕಾರ್ಯಗತಗೊಳ್ಳುವುದು ಚಿಕಿತ್ಸಕ ದೃಷ್ಟಿಯಿಂದ. ಮೂಲಭೂತ ಹಕ್ಕುಗಳು, ರಾಜ್ಯ ನೀತಿಯ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಕರ್ತವ್ಯಗಳಿಗೆ ಸಮಸ್ಯೆ ಪರಿಹಾರಕ ಕಾಯಕವೇ ಜೀವಾಳ. 560 ದೇಶೀಯ ಸಂಸ್ಥಾನಗಳನ್ನು, ಬ್ರಿಟಿಷ್ ನಿರ್ಮಿತ ಪ್ರಾಂತಗಳನ್ನು ಮತ್ತಿತರ ಕ್ಷೇತ್ರಗಳನ್ನು ಕ್ರೋಢೀಕರಿಸಿಕೊಂಡು ಅಭೇದ್ಯವಾದ ಒಕ್ಕೂಟವನ್ನು ಸ್ಥಾಪಿಸಲು ಮತ್ತು ಅದನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾದದ್ದು ಸಮಸ್ಯೆ ಪರಿಹಾರಕ ನಿಲುವಿನಿಂದ. ಕಾಶ್ಮೀರದ ಸಮಸ್ಯೆಗೆ ಸ್ಪಂದಿಸಿದುದು ಕೂಡಾ ಸಂವಿಧಾನದ ಧೀಶಕ್ತಿಯಿಂದ. ಮೂಲ ಸಂವಿಧಾನದಲ್ಲಿ ಬದಲಾದ ಸಾಮಾಜಿಕ ಪರಿಸರಕ್ಕೆ ಬೇಕಾದ ಸಲಕರಣೆಗಳಿಲ್ಲದಿದ್ದಾಗ ಆ ಸಮಸ್ಯೆಯನ್ನು ಪರಿಹರಿಸಿದ್ದು 103 ಸಾಂವಿಧಾನಿಕ ತಿದ್ದುಪಡಿಗಳ ಮೂಲಕ. ಆರ್ಥಿಕ ನ್ಯಾಯ, ಮೀಸಲಾತಿ ಮೂಲಕ ಸಾಮಾಜಿಕ ನ್ಯಾಯ, ರಾಜಧನದ ರದ್ದತಿ, ಪಕ್ಷಾಂತರ ನಿಷೇಧ, ಪಂಚಾಯತು ರಾಜ್ಯ ಸ್ಥಾಪನೆ, ಶಿಕ್ಷಣದ ಹಕ್ಕಿನ ಸೇರ್ಪಡೆ, ಸಹಕಾರಿ ಸಂಘಗಳ ಪುನರುಜ್ಜೀವನ ಇತ್ಯಾದಿ ಉದ್ದೇಶಗಳಿಗೆಂದು ತಂದ ಸಾಂವಿಧಾನಿಕ ತಿದ್ದುಪಡಿಗಳು ಸಂವಿಧಾನವೇ ದುರಸ್ತಿಗೊಳ್ಳುವ ಮೂಲಕ ಸಮಸ್ಯೆ ಪರಿಹಾರದ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡ ನಿದರ್ಶನಗಳು ಸಂವಿಧಾನದ ತಿದ್ದುಪಡಿಯ ಅಧಿಕಾರವನ್ನು ದುರುಪಯೋಗ ಮಾಡುವ ಸಮಸ್ಯೆ ಬಂದಾಗ ಮೂಲ ವಿನ್ಯಾಸ ಸಿದ್ಧಾಂತದ ಮೂಲಕ ಭೀತಿಯನ್ನು ನಿವಾರಿಸಿರುವುದು ಹಾಗೂ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಹೊಸ ಸಂಪ್ರದಾಯವನ್ನು ಸೃಜಿಸುವ ಮೂಲಕ ಜನರನ್ನು ಕಾಡುವ ಸಮಸ್ಯೆಗಳ ಪರಿಹಾರಕ್ಕೆ ಹೊಸ ವೇದಿಕೆಯನ್ನು ಕಟ್ಟಿಕೊಟ್ಟಿದ್ದು ಶಮನಕಾರಿ ಧೋರಣೆಯಲ್ಲದೆ ಇನ್ನೇನು? ಡಾ. ಅಂಬೇಡ್ಕರ ರವರಂದಂತೆ ನಾವೆಲ್ಲರೂ ಸಾಂವಿಧಾನಿಕ ನೈತಿಕತೆಯನ್ನು ನಮ್ಮ ಮನೋಭೂಮಿಕೆಯಲ್ಲಿ ಮತ್ತು ಸಂವಿಧಾನವನ್ನು ಪಾಲಿಸುವ ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಕಾರ್ಯರೂಪದಲ್ಲಿ ಇಳಿಸುವ ಮೂಲಕ ಸಮಸ್ಯೆ ಪರಿಹಾರದ ಸಾಂವಿಧಾನಿಕ ಯೋಜನೆ ಯಶಸ್ವಿಯಾಗುತ್ತದೆ. ❖

## ಮಕ್ಕಳ ಮೇಲಿನ ದೌರ್ಜನ್ಯ....

(ಮೂರನೇ ಪುಟದಿಂದ)

ಬಾಲಕಿ ಕುದುರೆಗೆ ಹುಲ್ಲು ತಿನ್ನಿಸಲು ಮನೆಯಿಂದ ಹೊರಹೋದ ಸಂದರ್ಭದಲ್ಲಿ ಆರೋಪಿಗಳು ಆ ಮಗುವನ್ನು ಅಪಹರಿಸಿ 3 ದಿನಗಳ ಕಾಲ ದೇವಸ್ಥಾನದಲ್ಲಿ ಬಚ್ಚಿಟ್ಟು ಸತತವಾಗಿ ಸಾಮೂಹಿಕ ಅತ್ಯಾಚಾರವೆಸಗಿ ನಂತರ ಆ ಮಗುವನ್ನು ಬರ್ಬರವಾಗಿ ಹತ್ಯೆಗೈಯಲಾಗಿತ್ತು. ಮಗು ಕಾಣದಾದಾಗ ಪೋಷಕರು ಕಂಗಾಲಾಗಿ ಪೊಲೀಸರ ನೆರವು ಬಯಸಿ ದೂರು ನೀಡಲು ಬಂದಾಗ ಪೊಲೀಸ್ ಅಧಿಕಾರಿಗಳು ಪ್ರಕರಣ ದಾಖಲಾತಿಯನ್ನು ಮಾಡಿಕೊಳ್ಳಲು ಮೊದಲಿಗೆ ನಿರಾಕರಿಸಿದ್ದರೆಂಬ ಕಾರಣಕ್ಕಾಗಿ ಈ ಪ್ರಕರಣದಲ್ಲಿ ನ್ಯಾಯಾಲಯವು 6 ಮಂದಿಯನ್ನು ದೋಷಿಗಳೆಂದು ತೀರ್ಪು ನೀಡಿತು. ಅದರಲ್ಲಿ 3 ಜನರಿಗೆ ಜೀವಾವಧಿ ಶಿಕ್ಷೆ ಮತ್ತು ಇನ್ನುಳಿದ ಮೂರು ಜನ ಪೊಲೀಸ್ ಅಧಿಕಾರಿಗಳಿಗೆ 5 ವರ್ಷ ಜೈಲು ಶಿಕ್ಷೆಯನ್ನು ವಿಧಿಸಿದೆ.

**ನಿಥಾರಿ ಪ್ರಕರಣ ಅಥವಾ ಸುರೇಂದ್ರ ಕೋಲಿ ವಿ. ಉತ್ತರಪ್ರದೇಶ ರಾಜ್ಯ ಮತ್ತು ಇತರರು (AIR 2011 SC 970)**

ದೆಹಲಿಯ ಹೊರವಲಯದಲ್ಲಿರುವ ನೋಯ್ಡಾ ಪರಿಸರದ ನಿವಾಸಿಯಾಗಿದ್ದ ರಿಂಪಾ ಎಂಬ ಮಗು 2005ರಲ್ಲಿ ನಿಗೂಢವಾಗಿ ನಾಪತ್ತೆಯಾಗುತ್ತದೆ. 2006 ರಲ್ಲಿ ಪಂಧೇರನ ನಿವಾಸದ ಹಿಂದಿರುವ ಚರಂಡಿಯಲ್ಲಿ ಹಲವಾರು ಮಾನವ ಅವಶೇಷಗಳು ಪತ್ತೆಯಾದ ನಂತರ ಸರಣಿ ಕಗ್ಗೊಲೆ ಪ್ರಕರಣ ಬೆಳಕಿಗೆ ಬರುತ್ತದೆ. ಈ ಪ್ರಕರಣದಲ್ಲಿ ಅಪಹರಣ, ಅತ್ಯಾಚಾರ ಮತ್ತು ಕೊಲೆಯ ಆರೋಪದ ಮೇಲೆ ಸುರೇಂದ್ರ ಕೋಲಿ ಎಂಬ ಸರಣಿ ಹಂತಕನನ್ನು ಪೊಲೀಸರು ಬಂಧಿಸಿದ ನಂತರ ಆರೋಪಿಯು ತಾನು ಯಾವ ರೀತಿ ಅಪ್ರಾಪ್ತ ಬಾಲಕಿಯರನ್ನು ಅಪಹರಿಸಿ ಅವರ ಮೇಲೆ ಅತ್ಯಾಚಾರ ಎಸಗಿ ಅವರ ಕೊಲೆ ಮಾಡುತ್ತಿದ್ದೆ ಎಂಬುದನ್ನು ತಾನೇ ಖುದ್ದಾಗಿ ಬಣ್ಣಿಸಿದ್ದ. ಅಷ್ಟೇ ಅಲ್ಲದೆ ಮೃತ ಬಾಲಕಿಯರ ದೇಹವನ್ನು ಭಕ್ಷಿಸುವಷ್ಟು ಕ್ರೂರಿಯಾಗಿದ್ದ ಈ ಹಂತಕನ ಪ್ರಕರಣವನ್ನು ನ್ಯಾಯಾಲಯವು ಅಪರೂಪದಲ್ಲೇ ಅಪರೂಪದ ಪ್ರಕರಣವೆಂದು ತೀರ್ಮಾನಿಸಿ ಆರೋಪಿಯ ಮೇಲೆ ಯಾವುದೇ ರೀತಿಯ ಕರುಣೆ ತೋರುವ ಪ್ರಶ್ನೆಯೇ ಬರುವುದಿಲ್ಲ ಎಂದ ಸರ್ವೋಚ್ಚ ನ್ಯಾಯಾಲಯವು, ಕೆಳ ನ್ಯಾಯಾಲಯ ವಿಧಿಸಿದ್ದ ಗಲ್ಲು ಶಿಕ್ಷೆಯನ್ನು ಖಾಯಂಗೊಳಿಸಿತು.

**ರಾಜಸ್ಥಾನ ರಾಜ್ಯ ವಿ. ಪ್ರಹ್ಲಾದಕುಮಾರ ಮೀನಾ ((2016) Cri. LJ 4738)**

ಈ ಪ್ರಕರಣದಲ್ಲಿ ಅಪರಾಧಿಯು 8 ವರ್ಷ ಬಾಲಕಿಗೆ ಚಾಕಲೇಟ್ ಕೊಟ್ಟು ತಾನು ಮಗುವಿನ ಹತ್ತಿರದ ಸಂಬಂಧಿಯೆಂದು ಮಗುವನ್ನು ನಂಬಿಸಿ, ನಿರ್ಜನ ಪ್ರದೇಶಕ್ಕೆ ಮಗುವನ್ನು ಕರೆದುಕೊಂಡು ಹೋಗಿ ಮಗುವಿನ ಮೇಲೆ ಅತ್ಯಾಚಾರವೆಸಗಿ ಮಗುವನ್ನು ಕೊಲೆ ಮಾಡಲಾಗಿತ್ತು. ಈ ಪ್ರಕರಣವನ್ನು ಭಾರತೀಯ ದಂಡ ಸಂಹಿತೆಯ ಕಲಂ 302 ಮತ್ತು ಪೋಕ್ಸೋ ಕಾಯ್ದೆಯ ಉಪಬಂಧಗಳ ಅಡಿಯಲ್ಲಿ ಅಪರೂಪದಲ್ಲೇ ಅಪರೂಪದ ಪ್ರಕರಣವೆಂದು ತೀರ್ಮಾನಿಸಿ ಸರ್ವೋಚ್ಚ ನ್ಯಾಯಾಲಯವು, ಕೆಳ ನ್ಯಾಯಾಲಯ ವಿಧಿಸಿದ್ದ ಗಲ್ಲು ಶಿಕ್ಷೆಯನ್ನು ಖಾಯಂಗೊಳಿಸಿತು.

**ವಿಶೇಷ ನ್ಯಾಯಾಲಯಗಳ ಸ್ಥಾಪನೆ**

ನಿರ್ಭಯಾ ಪ್ರಕರಣದ ನಂತರ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ಬಗೆಹರಿಸಲು 100 ರಷ್ಟು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ದಾಖಲಾದ ಪ್ರತಿಯೊಂದು ಜಿಲ್ಲೆಯಲ್ಲಿ ವಿಶೇಷ ನ್ಯಾಯಾಲಯಗಳ ಸ್ಥಾಪನೆಯಾಗಬೇಕೆಂದು ಸರ್ವೋಚ್ಚ ನ್ಯಾಯಾಲಯವು ನಿರ್ದೇಶಿಸಿದೆ.

**ಆನ್‌ಲೈನ್‌ನಲ್ಲಿ ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ತಡೆಗೆ ಸಿಬಿಐನ ವಿಶೇಷ ಘಟಕ ಸ್ಥಾಪನೆ**

ಅಂತರ್ಜಾಲ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಮತ್ತು ತನಿಖೆಯನ್ನು ನಡೆಸಲು ಸಿಬಿಐ ಆನ್‌ಲೈನ್ ಚೈಲ್ಡ್ ಸೆಕ್ಷುವಲ್ ಅಬ್ಯುಸ್ ಆ್ಯಂಡ್ ಎಕ್ಸ್‌ಪ್ಲಾಯ್ಟೇಶನ್ (ಒಸಿಎಸ್ಎಇ) ಎಂಬ ಹೊಸ ಘಟಕವನ್ನು ಸ್ಥಾಪಿಸಿದೆ. ಮಕ್ಕಳ ಅಶ್ಲೀಲ ಚಿತ್ರಗಳು ಮತ್ತು ವಿಡಿಯೊ ಪ್ರಸಾರ ನಿಯಂತ್ರಣವು ಈ ಘಟಕದ ಮುಖ್ಯ ಉದ್ದೇಶವಾಗಿದೆ. ಈ ಘಟಕವು ವಿಡಿಯೋಗಳನ್ನು ಸೃಷ್ಟಿಸಿದವರು ಮತ್ತು ಹಂಚಿಕೊಂಡವರನ್ನಷ್ಟೇ ಅಲ್ಲದೆ, ಮಕ್ಕಳ ವಿಡಿಯೋಗಳಿಗಾಗಿ ಜಾಲತಾಣಗಳಲ್ಲಿ ಹುಡುಕಾಟ ನಡೆಸಿದವರು ಮತ್ತು ಡೌನ್‌ಲೋಡ್ ಮಾಡಿದವರ ಮಾಹಿತಿಯನ್ನು ಕಲೆಹಾಕಿ ಪೋಸ್ಕೋ ಕಾಯ್ದೆಯಡಿ ಪ್ರಕರಣವನ್ನು ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಿ ತನಿಖೆಯನ್ನು ಮಾಡುವುದೇ ಆಗಿದೆ.

**ಪರಿಸಮಾಪ್ತಿ**

ಮಕ್ಕಳು ದೇಶದ ಆಸ್ತಿ. ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವು ಸಮಾಜದಲ್ಲಿ ಭಯದ ವಾತಾವರಣವನ್ನು ಸೃಷ್ಟಿಸಿದೆ. ಈ ಕುರಿತು ಸರಕಾರ ಎಷ್ಟೇ ಕಟ್ಟುನಿಟ್ಟಿನ ಕ್ರಮ ಕೈಗೊಂಡರೂ ಕೂಡಾ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಅನೇಕ ಸಂದರ್ಭಗಳಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬರುವುದೇ ಇಲ್ಲ. ಮರ್ಯಾದೆಗೆ ಅಂಜಿಯೋ ಅಥವಾ ಅದರ ಬಗ್ಗೆ ಜಾಗೃತಿಯ ಕೊರತೆಯ ಕಾರಣದಿಂದಗಿಯೋ ಪ್ರಕರಣಗಳು ಚಿಗುರುತ್ತಲೇ ಮುಚ್ಚಿ ಹೋಗುತ್ತವೆ. ಬಹುತೇಕ ಸಂದರ್ಭಗಳಲ್ಲಿ ಬಡತನ, ಅನಕ್ಷರತೆ, ಜಾಗೃತಿಯ ಕೊರತೆಯೂ ಕಾರಣವಾಗುತ್ತದೆ. ಆದರೆ ಪೋಕ್ಸೋ ಕಾಯ್ದೆಯ ಜಾರಿಯಿಂದಾಗಿ ಇಂದು ಮಕ್ಕಳ ಪೋಷಕರು ಸ್ವಲ್ಪಮಟ್ಟಿಗಾದರೂ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ❖

## ಪ್ರಾಮಾಣಿಕತೆ, ಕಠಿಣ....

(ಒಂದನೇ ಪುಟದಿಂದ)

ವಾದಮಂಡಿಸುವ ಕೌಶಲ್ಯವನ್ನು ಮತ್ತು ವಾದಿಸುವ ಕಲೆಯನ್ನು ಇನ್ನೂ ಚುರುಕುಗೊಳಿಸುತ್ತದೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ. (ಡಾ.) ಪಿ. ಈಶ್ವರ ಭಟ್, ಮಾನ್ಯ ಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರು ಮಾತನಾಡುತ್ತ, ಕಾನೂನಿನ ಬಗ್ಗೆ ಆಳವಾದ ತಿಳಿವಳಿಕೆ ಒಬ್ಬ ವಕೀಲನಲ್ಲಿರಬೇಕಾದ ಆವಶ್ಯಕ ಅಂಶ. ಭಾಷೆಯ ಮೇಲಿನ ಹಿಡಿತ, ವಿಷಯದ ಸಂಪೂರ್ಣ ತಿಳುವಳಿಕೆ ಅವನನ್ನು ನಿಶ್ಚಿತ ಗುರಿ ತಲುಪುವಲ್ಲಿ ಸಹಾಯ ಮಾಡುತ್ತವೆ ಎಂದರು. ಕಾರ್ಯಕ್ರಮದಲ್ಲಿ ಕುಲಸಚಿವರು, ಡೀನ್ ಮತ್ತು ನಿರ್ದೇಶಕರು, ಕುಲಸಚಿವರು (ಮೌಲ್ಯಮಾಪನ) ಹಾಗೂ ಆಹ್ವಾನಿತರು ಉಪಸ್ಥಿತರಿದ್ದರು. ❖